# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **991** |
| 2 | ಸದಸ್ಯರ ಹೆಸರು | ಶ್ರೀ ನಸೀರ್ ಅಹ್ಮದ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 21.09.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಂಜೂರಾಗಿರುವ ಗೋಮಾಳದ ಜಮೀನುಗಳನ್ನು ದರಖಾಸ್ತು ಪೋಡಿ ದುರಸ್ತು ಮಾಡಲಾಗಿದೆಯೇ; ಹಾಗಿದ್ದಲ್ಲಿ, ಅಂತಹ ಸರ್ವೆ ನಂಬರುಗಳ ಜಮೀನುಗಳನ್ನು ಗ್ರಾಮ ನಕ್ಷೆ ಮತ್ತು ಪಹಣಿಯಲ್ಲಿ ಇಂಡೀಕರಣ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು; ಯಾವ ನಿಗಧಿತ ಕಾಲಮಿತಿಯಲ್ಲಿ ಮಾಡಲಾಗ ವುದು; | ಭೂಮಾಪನ ಇಲಾಖೆ ಸುತ್ತೋಲೆ ಸಂ:ತಾಂತ್ರಿಕ/ದರಖಾಸ್ತು/ಪೋಡಿ/ಆಂದೋಲನ/40/2008-09 ದಿನಾಂಕ: 20-10-2008 ರನ್ವಯ ದರಖಾಸ್ತು ಪೋಡಿ ಅಳತೆಗೆ ಒಳಪಡುವ ಸರ್ಕಾರದಿಂದ ಮಂಜೂರಾದ ಜಮೀನಿನ ಕುರಿತು ಆ ನಂಬರಿನಲ್ಲಿ ಇದುವರೆಗೆ ಆಗಿರುವ ಎಲ್ಲಾ ಜಮೀನುಗಳ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿಕೊಂಡು ಮಂಜೂರಿಯಂತೆ ಪೋಡಿ ಮಾಡಲು ಭೂಮಾಪನ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ದೃಢೀಕರಿಸಿ ಪೋಡಿ ಅಳತೆ ಕುರಿತು ಭೂಮಾಪನ ಶಾಖೆಗೆ ಕಳುಹಿಸಲು ಮತ್ತು ನಂತರ ಅಳತೆ ಕಾರ್ಯ ಕೈಗೊಂಡು, ನಮೂನೆ 6 ರಿಂದ 10 ಅನ್ನು ಭರ್ತಿ ಮಾಡಿ ಅರ್ಹ ಪ್ರಕರಣಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳುವಂತೆ ಸುತ್ತೋಲೆ ಸಂ:ತಾಂತ್ರಿಕ/ಆಡಳಿತ/ ಸುತ್ತೋಲೆ/29/2009-10, ದಿನಾಂಕ:25-01-2010ರಲ್ಲಿ ತಿಳಿಸ ಲಾಗಿದೆ.<br><br>ತುರ್ತು ಮತ್ತು ವಿಶೇಷ ಸಂದರ್ಭಗಳ ಪ್ರಕರಣಗಳಲ್ಲಿ ಭೂ ಮಂಜೂರಿಯು ನೈಜತೆಯಿಂದ ಕೂಡಿರುವ ಬಗ್ಗೆ ಪರಿಶೀಲಿಸಿ, ನಮೂನೆ 1 ರಿಂದ 5 ಭರ್ತಿ ಮಾಡಿ, ಧೃಢೀಕರಿಸಿ ಏಕವ್ಯಕ್ತಿಗೆ ಪೋಡಿ ಮಾಡಲು ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 8 ಎಲ್‌ಜಿಪಿ 2016 ದಿನಾಂಕ: 20-06-2016 ಹಾಗೂ ತಿದ್ದುಪಡಿ ಕಂಇ 8 ಎಲ್‌ಜಿಪಿ 2016(ಭಾಗ-1) ದಿನಾಂಕ: 18-07-2016 ರನ್ವಯ ತಹಶೀಲ್ದಾರರಿಗೆ ಅಧಿಕಾರ ನೀಡಲಾಗಿದೆ.<br><br>ಮೇಲ್ಕಂಡ ಸುತ್ತೋಲೆಗಳನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಂಜೂರಾಗಿರುವ ಜಮೀನುಗಳನ್ನು ಆದ್ಯತೆ ಮೇರೆಗೆ ಪೋಡಿ ದುರಸ್ತಿ ಮಾಡಲಾಗುತ್ತಿದೆ. ಪೋಡಿ ದುರಸ್ತಿಯಂತೆ ನೀಡುವ ಹೊಸ ಸರ್ವೆ ನಂಬರನ್ನು ಪೋಡಿ ದುರಸ್ತಿ ಪಡಿಸಿ ದಾಖಲೆ ಮೇಲು ರುಜು ಮಾಡುವ ಸಮಯದಲ್ಲಿಯೇ ಕಚೇರಿಗಳಲ್ಲಿರುವ ಕಚ್ಚಾ ಗ್ರಾಮ ನಕಾಶೆಗಳಲ್ಲಿ ಕಾಲೋಚಿತ ಗೊಳಿಸಿಕೊಳ್ಳಲಾಗುತ್ತಿದೆ ಮತ್ತು ಹೊಸ ನಂಬರುಗಳನ್ನು ಪಹಣಿ ಯಲ್ಲಿ ಇಂಡೀಕರಣ ಮಾಡಲಾಗುತ್ತಿದೆ. ಸದರಿ ಕಾಲೋಚಿತ ಗ್ರಾಮ ನಕಾಶೆಯನ್ನು ಕಾಲಕಾಲಕ್ಕೆ ಮುದ್ರಿಸಿ ಪೂರೈಸಲಾಗುತ್ತಿದೆ. |

<table>
<tr><td>ಆ)</td><td>ಗೋಮಾಳವನ್ನು ಉಳುಮೆ ಮಾಡುತ್ತಿರುವ ರೈತರಿಗೆ ಸಾಗುವಳಿ ಚೀಟಿ ವಿತರಣೆಯಾಗಿದೆಯೇ; ಮತ್ತು ಪಹಣಿಯಲ್ಲಿ ಇಂಡೀಕರಣ ಮಾಡ ಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣ ವೇನು ಹಾಗೂ ಕೈಗೊಳ್ಳುವ ಕ್ರಮ ಮತ್ತು ಯಾವ ನಿಗಧಿತ ಕಾಲಮಿತಿ ಯಲ್ಲಿ ಮಾಡಲಾಗುವುದು;</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉಳುಮೆ ಮಾಡುತ್ತಿರುವ ರೈತರಿಗೆ ಈಗಾಗಲೇ ಮಂಜೂರು ಮಾಡಿ ಸಾಗುವಳಿ ಚೀಟಿ ವಿತರಣೆ ಮಾಡಲಾಗಿರುತ್ತದೆ ಹಾಗೂ ಮಂಜೂರಾತಿಯಾಗಿ ಸಾಗುವಳಿ ಚೀಟಿ ವಿತರಣೆ ಮಾಡಿದ ನಂತರ ಇಂಡೀಕರಣ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ:-<br>
<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ನಮೂನೆ -50</th><th>ನಮೂನೆ -53</th><th>ನಮೂನೆ -57</th></tr>
<tr><td>1</td><td>ದೇವನಹಳ್ಳಿ</td><td>3144</td><td>5213</td><td>02</td></tr>
<tr><td>2</td><td>ದೊಡ್ಡಬಳ್ಳಾಪುರ</td><td>4424</td><td>2077</td><td>0</td></tr>
<tr><td>3</td><td>ಹೊಸಕೋಟೆ</td><td>2706</td><td>1209</td><td>0</td></tr>
<tr><td>4</td><td>ನೆಲಮಂಗಲ</td><td>2180</td><td>542</td><td>0</td></tr>
<tr><td></td><td>**ಒಟ್ಟು**</td><td>**12454**</td><td>**9041**</td><td>**02**</td></tr>
</table></td></tr>
<tr><td>ಇ)</td><td>ಸದರಿ ದಾಖಲೆಗಳ ವಿವರಗಳನ್ನು ಭೂಮಿ ತಂತ್ರಾಂಶದಲ್ಲಿ ಅಳವಡಿಸ ದಿರುವುದರಿಂದ ರೈತರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು ಮತ್ತು ಯಾವ ನಿಗಧಿತ ಕಾಲಮಿತಿಯೊಳಗೆ ಸರಿಪಡಿಸಲಾಗುವುದು; (ವಿವರ ನೀಡುವುದು)</td><td>ಸರ್ಕಾರಿ ಗೋಮಾಳದಲ್ಲಿ ನಮೂನೆ-50,53 ಮತ್ತು 57ರಲ್ಲಿ ಅರ್ಜಿ ಸಲ್ಲಿಸಿ, ಉಳುಮೆ ಮಾಡುತ್ತಿರುವ ಸಾಗುವಳಿದಾರರ ಅರ್ಹ ಅರ್ಜಿಗಳನ್ನು ಬಗರ್ ಹುಕುಂ ಸಮಿತಿಯಲ್ಲಿ ಮಂಡಿಸಿ, ಸಮಿತಿ ತೀರ್ಮಾನದಂತೆ ಸಾಗುವಳಿ ಚೀಟಿ ವಿತರಣೆ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಾಗುವಳಿ ಚೀಟಿ ವಿತರಣೆಯಾದ ನಂತರ ಭೂಮಿ ತಂತ್ರಾಂಶದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳ ಲಾಗಿರುತ್ತದೆ.</td></tr>
<tr><td>ಈ)</td><td>ಬಡ ರೈತರಿಗೆ ಮಂಜೂರಾದ ಗೋಮಾಳದ ಜಮೀನುಗಳು ಬಲಾಢ್ಯರ ಪಾಲಾಗದಂತೆ ದಾಖಲೆ ಗಳನ್ನು ಸರಿಪಡಿಸುವ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 31 ಎಲ್‌ಜಿಪಿ 2021, ದಿ: 01.10.2021 ಮತ್ತು 25.10.2021 ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಸಾಮಾನ್ಯ/ಇತರೆ ವರ್ಗದ ಜನರಿಗೆ ಮಂಜೂರಾಗಿರುವ ಎಲ್ಲಾ ಜಮೀನುಗಳನ್ನು ಪಟ್ಟಿ ಮಾಡಿ ಭೂಮಿ ತಂತ್ರಾಂಶದಲ್ಲಿ ಗುರುತಿಸಿ, ಫ್ಲಾಗ್ ಮಾಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಎಂದು ನಿರ್ದೇಶನ ನೀಡಲಾಗಿರುತ್ತದೆ.</td></tr>
</table>

**ಸಂಖ್ಯೆ: ಕಂಇ 204 ಎಸ್‌ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು